ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

---

**ನಿರ್ಮಲ ಭಾರತ್ ಅಭಿಯಾನ 2013-14ರ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಶಾಲೆ ಮತ್ತು ಅಂಗನವಾಡಿ ಶೌಚಾಲಯಗಳ ನಿರ್ಮಾಣದ ಕುರಿತು ದಿನಾಂಕ 14.08.2013ರಂದು ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷತೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಭಾ ಭವನದಲ್ಲಿ ನಡೆದ ಸಭೆಯ ನಡಾವಳಿಗಳು:-**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-**

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಕಾರ್ಯದರ್ಶಿಗಳು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು.
4. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೆ.ಆರ್.ಸರ್ಕಲ್, ಬೆಂಗಳೂರು.
5. ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.
6. ಅಪರ ನಿರ್ದೇಶಕರು (ನೀರು ಮತ್ತು ನೈರ್ಮಲ್ಯ)(ಪ್ರಭಾರ), ಕ.ಗ್ರಾ.ನೀ.ಸ&ನೈ.ಸಂಸ್ಥೆ.

**ಶಾಲಾ ನೈರ್ಮಲ್ಯ:-**

ನಿರ್ಮಲ ಭಾರತ್ ಅಭಿಯಾನದ ಮಾರ್ಗಸೂಚಿಯ ಪ್ರಕಾರ ಶಾಲಾ ಶೌಚಾಲಯ ನಿರ್ಮಾಣಕ್ಕಾಗಿ ರೂ.35000/- ಲಭ್ಯ ಇರುತ್ತದೆ. ಸರ್ವಶಿಕ್ಷ ಅಭಿಯಾನದ ಯೋಜನಾ ನಿರ್ದೇಶಕರು ಜಿಲ್ಲಾವಾರು ಹೆಣ್ಣು ಮತ್ತು ಗಂಡು ಮಕ್ಕಳ ಶಾಲಾ ಶೌಚಾಲಯ ವಿವರ ನೀಡಿ, ಹೆಣ್ಣು ಮತ್ತು ಗಂಡು ಮಕ್ಕಳ ಸಂಖ್ಯೆಗನುಗುಣವಾಗಿ ಅಗತ್ಯವಿರುವ ಹೆಚ್ಚುವರಿ ಘಟಕಗಳ ಬಗ್ಗೆ ವಿವರಿಸಿದರು. ಈ ರೀತಿ ಸರ್ವಶಿಕ್ಷ ಅಭಿಯಾನದಿಂದ ಬೇಡಿಕೆ ಇರುವ ಹೆಚ್ಚುವರಿ ಘಟಕಗಳಿಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಈಗಿರುವ ಶೌಚಾಲಯಗಳಿಗೆ ಹೆಚ್ಚುವರಿಯಾಗಿ ಮೂತ್ರಾಲಯಗಳನ್ನು ನಿರ್ಮಾಣ ಮಾಡಲು ಅನುಮತಿ ನೀಡಬಹುದು. ಇದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಗಳನ್ನು ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರು, ನಿರ್ಮಲ ಭಾರತ ಅಭಿಯಾನದ ನಿರ್ದೇಶಕರಿಗೆ ಪೂರೈಸಲು ಕೋರಲಾಗಿದೆ.

a) ಆಧ್ಯತೆಯ ಮೇರೆಗೆ ಜಿಲ್ಲಾವಾರು 2500 ಶಾಲೆಗಳು, ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆ, ಶಾಲೆ ಇರುವ ಪರಿಸರದ ವಿವರ, ಎಸ್‌ಡಿಎಮ್‌ಸಿ ವಿವರ ಮತ್ತು ಬ್ಯಾಂಕ್ ಖಾತೆ ಸಂಖ್ಯೆಗಳನ್ನು ಆಗಸ್ಟ್ 24, 2013ರೊಳಗೆ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಕಛೇರಿಗೆ ತಲುಪಿಸುವುದು.

b) ಹೆಣ್ಣು ಮತ್ತು ಗಂಡು ಮಕ್ಕಳ ಶೌಚಾಲಯದ ಯೋಜನೆ ಮತ್ತು ಅಂದಾಜು ವೆಚ್ಚಗಳನ್ನು ಪೂರೈಸುವುದು.

c) ನಿರ್ಮಲ ಭಾರತ್ ಅಭಿಯಾನದಡಿಯಲ್ಲಿ ಲಭ್ಯವಿರುವುದು ರೂ.35000/-ಗಳ ಪ್ರೋತ್ಸಾಹಧನಕ್ಕೆ ಆಧರಿಸಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಮುಖ್ಯ ಇಂಜಿನಿಯರ್‌ರವರು ಟೈಪ್‌ಡಿಸೈನ್‌ನ್ನು ತಯಾರಿಸತಕ್ಕದ್ದು.

d) ಸರ್ವ ಶಿಕ್ಷಣ ಅಭಿಯಾನ ದಿಂದ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮಗಳಿಗೆ ಕಳಿಸಿರುವ ಪಟ್ಟಿಯನ್ನು ಆಧರಿಸಿ, ನಿರ್ಮಲ ಭಾರತ್ ಅಭಿಯಾನದ ನಿರ್ದೇಶನದಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ಮಲ ಭಾರತ್ ಅಭಿಯಾನದ ಮಾರ್ಗಸೂಚಿಯ ಪ್ರಕಾರ ಶಾಲಾ ಶೌಚಾಲಯಕ್ಕೆ ಲಭ್ಯವಿರುವ ಅನುದಾನವನ್ನು ನೇರವಾಗಿ ಆಯಾಯ (ಆಯ್ಕೆಯಾದ) ಶಾಲಾ ಎಸ್‌ಡಿಎಮ್‌ಸಿಗಳಿಗೆ ಬಿಡುಗಡೆ ಮಾಡುವುದು ಈಗಾಗಲೇ ನಿಗಧಿಪಡಿಸಿ ಅನುಮೋದನೆಗೊಂಡ ಟೈಪ್‌ಡಿಸೈನ್ ಪ್ರಕಾರ ಎಸ್‌ಡಿಎಮ್‌ಸಿಯು ಅನುಷ್ಠಾನಗೊಳಿಸತಕ್ಕದ್ದು. ಈ ಎಲ್ಲಾ ಪ್ರಕ್ರಿಯೆಗಳನ್ನು SLSSC ಯಿಂದ ಅನುಮೋದನೆ ಪಡೆಯತಕ್ಕದ್ದು.

e) ಅನುಷ್ಠಾನ ಪ್ರಕ್ರಿಯೆಯು ಸಂಪೂರ್ಣ ಜವಾಬ್ದಾರಿಯು ಆಯಾಯ ಜಿಲ್ಲೆಯ ಡಿಡಿಪಿಐ ರವರದ್ದಾಗಿದ್ದು, ಅನುಷ್ಟಾನದ ಖಚಿತವರದಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರಿಗೆ ಸಲ್ಲಿಸಬೇಕು.

**ಹೆಣ್ಣು ಮಕ್ಕಳ ಪ್ರೌಢ ಶಾಲೆಗಳಿಗೆ ಇನ್ಸಿನಿರೇಟರ್‌ಗಳನ್ನು ಅಳವಡಿಸುವ ಕುರಿತು:-**

a) ಪ್ರತೀ ತಾಲ್ಲೂಕಿನಲ್ಲೂ ಇನ್ಸಿನಿರೇಟರ್ ಅಳವಡಿಸಲು ಒಂದು ಹೆಣ್ಣು ಮಕ್ಕಳ ಪ್ರೌಢಶಾಲೆಯನ್ನು ಗುರುತಿಸಿ ಆಗಸ್ಟ್, 24-2013ರ ಒಳಗೆ ವಿವರಗಳನ್ನು ನಿರ್ಮಲ ಭಾರತ್ ಅಭಿಯಾನಕ್ಕೆ ಕಳುಹಿಸಿಕೊಡುವುದು.

b) ಟೈಪ್, ಡಿಸೈನ್ ಮತ್ತು ಇನ್ಸಿನಿರೇಟರ್‌ನ ಮೊತ್ತವನ್ನು ಈಗಾಗಲೇ ಸರ್ವ ಶಿಕ್ಷಣ ಅಭಿಯಾನದಿಂದ ಅಂತಿಮಗೊಳಿಸಿದ್ದು, ಅದನ್ನು ನಿರ್ಮಲ ಭಾರತ್ ಅಭಿಯಾನಕ್ಕೆ ಕಳುಹಿಸಿಕೊಡುವುದು.

c) ನಿರ್ಮಲ ಭಾರತ್ ಅಭಿಯಾನವು ಈ ಎಲ್ಲಾ ಪ್ರಕ್ರಿಯೆಗಳ ವಿವರ ಪಡೆದು ಅನುಮೋದನೆಯನ್ನು ಪಡೆದ ನಂತರ ಅನುಷ್ಟಾನ ಪ್ರಕ್ರಿಯೆ ಕೈಗೊಳ್ಳುವುದು.

**ಅಂಗನವಾಡಿ ಶೌಚಾಲಯ:-**

ನಿರ್ಮಲ ಭಾರತ್ ಅಭಿಯಾನದ ಮಾರ್ಗಸೂಚಿಯ ಪ್ರಕಾರ ಅಂಗನವಾಡಿಯಲ್ಲಿ ಶಿಶುಸ್ನೇಹಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವುದಕ್ಕಾಗಿ ರೂ.8000/-ಗಳನ್ನು ನಿಗಧಿಪಡಿಸಲಾಗಿರುತ್ತದೆ. ಪ್ರಸ್ತುತ 15149 ಸರ್ಕಾರಿ ಕಟ್ಟಡದಲ್ಲಿರುವ ಅಂಗನವಾಡಿಗಳಿಗೆ ಶೌಚಾಲಯಗಳಿರುವುದಿಲ್ಲ. ಆದ್ದರಿಂದ 2013-14ಕ್ಕೆ ನಿರ್ಮಲ ಭಾರತ್ ಅಭಿಯಾನದಿಂದ 2000 ಅಂಗನವಾಡಿಗಳಿಗೆ ಶೌಚಾಲಯ ನಿರ್ಮಾಣ ಮಾಡಲು ಗುರಿ ಹೊಂದಲಾಗಿದೆ. ಸಭೆಯಲ್ಲಿ ಈ ಕೆಳಗಿನಂತೆ ಚರ್ಚಿಸಲಾಯಿತು.

a) 2013-14ಕ್ಕೆ ನಿಗಧಿಪಡಿಸಿದ 2000 ಅಂಗನವಾಡಿಗಳನ್ನು ಜಿಲ್ಲಾವಾರು ಗುರುತಿಸಿ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ನಿರ್ದೇಶಕರಿಗೆ ಸಲ್ಲಿಸುವುದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರ ಜವಾಬ್ದಾರಿ.

b) PRED ಯ ಮುಖ್ಯ ಅಭಿಯಂತರರು ಅಂಗನವಾಡಿಗಳಲ್ಲಿ ನಿರ್ಮಿಸಬೇಕಾಗಿರುವ ಶಿಶು ಸ್ನೇಹಿ ಶೌಚಾಲಯಕ್ಕೆ ನಿಗದಿಪಡಿಸಿದ ರೂ.8,000/-ಕ್ಕೆ ಟೈಪ್ ಡಿಸೈನ್‌ನ್ನು ತಯಾರಿಸಿ, ಆಗಸ್ಟ್ 24, 2013ರೊಳಗೆ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ನಿರ್ದೇಶಕರಿಗೆ ಕಳಿಸಿ ಕೊಡುವುದು.

c) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಬಂದಂತಹ ಪಟ್ಟಿಯನ್ನು ಆದರಿಸಿ, ಎಲ್ಲಾ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೇರವಾಗಿ ಗ್ರಾಮ ಪಂಚಾಯಿತಿಗೆ ಹಣ ಬಿಡುಗಡೆ ಮಾಡಲು ನಿರ್ದೇಶನ ನೀಡಲು ನಿರ್ಮಲ ಭಾರತ್ ಅಭಿಯಾನದ ನಿರ್ದೇಶಕರು ರಾಜ್ಯ ಮಟ್ಟದ ಯೋಜನಾ ಅನುಮೋದನಾ ಸಮಿತಿಯ ಮುಂದೆ ಮಂಡಿಸುವುದು. ಗ್ರಾಮ ಪಂಚಾಯ್ತಿಗಳು ಮುಖ್ಯ ಇಂಜಿನಿಯರ್, PRED ಸಮಿತಿಯವರಿಂದ ಕೊಡಲ್ಪಟ್ಟ ಟೈಪ್ ಡಿಸೈನ್ ಪ್ರಕಾರವೇ ಅನುಷ್ಠಾನಗೊಳಿಸಿ, ಬಳಿಕೆ ಪ್ರಮಾಣ ಪತ್ರವನ್ನು ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸುವುದು.

d) ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರು ಶೌಚಾಲಯ ನಿರ್ಮಾಣ ಮತ್ತು ಅನುಷ್ಠಾನದ ಜವಬ್ದಾರರಾಗಿರುತ್ತಾರೆ.

ಸಭೆಯನ್ನು ಅಧ್ಯಕ್ಷರು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಪ್ರಧಾನ ಕಾರ್ಯದರ್ಶಿಯವರ ಪರವಾಗಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರವರಿಗೆ:**

1. ಕಾರ್ಯದರ್ಶಿಗಳು (PR), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು.
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
4. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು.
5. ಸಹಾಯಕ ನಿರ್ದೇಶಕರು, ICDS (ಸಮಗ್ರ ಶಿಶು ಅಭಿವೃದ್ಧಿ ಯೋಜನೆ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು.

**<u>ಪ್ರತಿಯನ್ನು:</u>**

1. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.